# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1268 |
| ಸದಸ್ಯರ ಹೆಸರು | : | ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21-12-2018 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4ರಲ್ಲಿ ತುಮಕೂರಿನವರೆಗೆ ಮೂರು ಪಥದ ರಸ್ತೆ ಇದ್ದು, ತುಮಕೂರು ನೆಲಮಂಗಲದವರೆಗೆ ಎರಡು ಪಥದ ರಸ್ತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ | ಬಂದಿದ್ದಲ್ಲಿ, ತುಮಕೂರಿನಿಂದ ನೆಲಮಂಗಲದವರೆಗೆ ಮೂರು ಪಥದ ರಸ್ತೆಯನ್ನು ನಿರ್ಮಾಣ ಮಾಡಲು ಸರ್ಕಾರ ಇಲ್ಲಿಯವರೆಗೆ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ರಾಷ್ಟ್ರೀಯ ಹೆದ್ದಾರಿ-48 (ಹಳೆಯ ರಾಷ್ಟ್ರೀಯ ಹೆದ್ದಾರಿ-4) ನೆಲಮಂಗಲದಿಂದ ತುಮಕೂರುವರೆಗೆ ಹಾಲಿ ಇರುವ 4 ಪಥದ ರಸ್ತೆಯನ್ನು 6 ಪಥದ ರಸ್ತೆಯನ್ನಾಗಿ ಅಗಲೀಕರಿಸುವ ಕಾಮಗಾರಿಯ (ಬಿ.ಓ.ಟಿ. ಯೋಜನೆ) ವಿಸ್ತೃತ ಯೋಜನಾ ವರದಿ ತಯಾರಿಕಾ ಕಾರ್ಯವನ್ನು ಈಗಾಗಲೇ ಕೈಗೆತ್ತಿಕೊಂಡಿರುವುದಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುತ್ತಾರೆ. |
| ಇ. | ಈ ರಸ್ತೆಯಲ್ಲಿ ಹೊರ ರಾಜ್ಯದಿಂದ ಬರುವ ವಾಹನಗಳ ಜೊತೆಗೆ ರಾಜ್ಯದ 15 ರಿಂದ 20 ಜಿಲ್ಲೆಗಳಿಂದ ಬರುವ ವಾಹನಗಳು ಸಹ ಹಾದು ಹೋಗುತ್ತಿರುವುದರಿಂದ ದಿನೇ ದಿನೇ ಅಪಘಾತಗಳು ನಡೆಯುತ್ತಿದ್ದು, ಸಾವಿನ ಸಂಖ್ಯೆ ಹೆಚ್ಚಾಗುತ್ತಿರುವುದು ಮತ್ತು ವಾಹನಗಳ ದಟ್ಟಣೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಹೌದು.<br><br>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಧಾನ ಕಚೇರಿಯಿಂದ ಈ ಮೇಲಿನ ಹೆದ್ದಾರಿಯನ್ನು Access Controlled Highway ಯನ್ನಾಗಿ ನಿರ್ಮಿಸಲು Hybrid Annuity Mode matching with Adjacent package ರೀತಿ ಕಾರ್ಯಗತಗೊಳಿಸಲು ನಿರ್ದೇಶಿಸಿದ್ದು, ಡಿಪಿಆರ್ ಸಮಾಲೋಚಕರು, ಅಂತಿಮ ಕಾರ್ಯಸಾಧ್ಯತಾ ವರದಿಯನ್ನು ಜೂನ್-2019 ರೊಳಗಾಗಿ ಸಲ್ಲಿಸುವ ಸಾಧ್ಯತೆಯಿರುತ್ತದೆ. ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿರುವುದಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುತ್ತಾರೆ. |
| ಈ. | ಹಾಗಿದ್ದಲ್ಲಿ, ತಕ್ಷಣವೇ ತುಮಕೂರು ನೆಲಮಂಗಲದವರೆಗೆ ಮೂರು ಪಥದ ರಸ್ತೆಯನ್ನು ನಿರ್ಮಾಣ ಮಾಡಲು ಕ್ರಮ ವಹಿಸಲಾಗುವುದೇ/ | |

**ಸಂಖ್ಯೆ:** ಲೋಇ 412 ಸಿಎನ್‌ಹೆಚ್ 2018

(ಹೆಚ್.ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು